**ದಿನಾಂಕಃ 09-11-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ವೈ.ಹೆಚ್.ಕೆ. ವಕೀಲರಿಂದಃ**

ನಾನು ವಿದ್ಯಾನಗರದಲ್ಲಿ ವಾಸವಾಗಿದ್ದೇನೆ. ಮನೆಯ ನಂಬರು ನನಗೆ ಗೊತ್ತಿಲ್ಲ. ಸುಮಾರು 7-8 ವರ್ಷಗಳಿಂದ ವಾಸವಾಗಿದ್ದೇನೆ. ನಾನು ಇಟ್ಟಿಗೆ ವ್ಯಾಪಾರದಲ್ಲಿ ಕಮಿಷನ್ ಎಂಜೆಂಟ್ ಎಂದು ಕೆಲಸ ಮಾಡುತ್ತೇನೆ. ನನಗೆ 5,10 ಮತ್ತು 11 ನೇ ಪ್ರತಿವಾದಿಯ ಗಂಡ ನನಗೆ ಗೊತ್ತಿದೆ. ಅವರು ನನಗೆ ಸುಮಾರು 10 ವರ್ಷಗಳಿಂದ ಪರಿಚಯವಿದ್ದಾರೆ. ನಾವೇಲ್ಲರೂ ಸ್ನೇಹಿತರು ಎಂದರೆ ಸರಿಯಲ್ಲ. ಹಾಗೆ ಮುಖಪರಿಚಯವಿದ್ದಾರೆ. 10 ನೇ ಪ್ರತಿವಾದಿ ಸಿದ್ದಲಿಂಗಪ್ಪ ಹೇಗೆ ಪರಿಚಯ ಎಂದರೆ ನಾವು ಒಂದೇ ಊರಿನವರು ಆಗಿದ್ದು ದಿನ ಬೆಳಿಗ್ಗೆ ನೋಡುತ್ತೇವೆ ಹಾಗಾಗಿ ಪರಿಚಯವಿದೆ. ಸಿದ್ದಲಿಂಗಪ್ಪ ನಾನು ಸಂಬಂಧಿಕ ಎಂದರೆ ಸರಿಯಲ್ಲ. ರಾಣೇಬೆನ್ನೂರಿನ ಹಾಲಿ ಶಾಸಕರಾದ ಅರುಣಕುಮಾರ ರವರು ನನ್ನ ಸಂಬಂಧಿಕರು ಎಂದರೆ ಸಾಕ್ಷಿಯೂ ದೂರದ ಸಂಬಂಧಿ ಎಂದು ಹೇಳುತ್ತಾರೆ. ನಾನು, 5 ,10 ನೇ ಪ್ರತಿವಾದಿಯರು ಶಾಸಕರ ಹಿಂಭಾಲಕರು ಎಂದರೆ ಸರಿಯಲ್ಲ.

2. ನಾನು ಸುಮಾರು ಕೇಸುಗಳಲ್ಲಿ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಕೊಡಿಯಾಲ ಹೊಸಪೇಟೆಯ ಜನರು ಯಾವುದಾದರೂ ಪ್ರಕರಣದಲ್ಲಿ ಸಾಕ್ಷಿ ಮಾಡಿಸಬೇಕಾದರೆ ನನ್ನನ್ನು ಸಾಕ್ಷಿ ಮಾಡಿಸುತ್ತಾರೆ ಎಂದರೆ ಸರಿಯಲ್ಲ. ನಾನು ಸುಮಾರು ಪ್ರಕರಣಗಳಲ್ಲಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಜಕ್ರಿಯಾ ರವರು ಎಲ್ಲಿ ವಾಸವಾಗಿದ್ದಾರೆ ಎಂದರೆ ಕೋಡಿಯಾಲ ಹೊಸಪೇಟೆ ಮನೆ ನಂ.507/2 ರಲ್ಲಿ ವಾಸವಾಗಿದ್ದಾರೆ. ಸಿದ್ದಲಿಂಗಪ್ಪ ರವರು ಎಲ್ಲಿ ವಾಸವಾಗಿದ್ದಾರೆ ಎಂದರೆ ಕೊಡಿಯಾಲ ಹೊಸಪೇಟೆಯಲ್ಲಿ ಮನೆ ನಂ.702/12 ವಾಸವಾಗಿದ್ದಾರೆ. ಎಷ್ಟು ವರ್ಷದಿಂದ ವಾಸವಾಗಿದ್ದಾರೆ ಎಂದರೆ ಸುಮಾರು 4-5 ವರ್ಷಗಳಿಂದ ವಾಸವಾಗಿದ್ದಾರೆ. ನಾನು ವಾದಿಯನ್ನು ಸುಮಾರು ಎಷ್ಟು ವರ್ಷದಿಂದ ನೋಡುತ್ತಿದ್ದೀರಾ ಎಂದರೆ ಸುಮಾರು 10-15 ವರ್ಷದಿಂದ ನಮ್ಮ ಊರಿನಲ್ಲಿ ವಾಸವಾಗಿದ್ದಾರೆ.

3. ನಾನು ಹಿಂದೆ ಕೊಡಿಯಾಲ ಹೊಸಪೇಟೆಯ ತುಂಗಭದ್ರ ನಗರದಲ್ಲಿ ವಾದಿ ವಾಸವಾಗಿದ್ದಾಗ ನೋಡಿದ್ದೇ ಈಗ ಎಲ್ಲಿ ವಾಸವಾಗಿದ್ದಾರೆ ಎಂದು ನಾನು ನೋಡಿಲ್ಲ.

ವಾದಿಯನ್ನು ಇತ್ತೀಚೆಗೆ ಎಷ್ಟು ವರ್ಷದಿಂದ ನೋಡಿಲ್ಲ ಎಂದರೆ ಸುಮಾರು 7-8 ವರ್ಷಗಳಿಂದ ನೋಡಿಲ್ಲ. ವಾದಿ ತುಂಗಭದ್ರ ನಗರದಲ್ಲಿ ಈ ಹಿಂದೆ ಎಷ್ಟನೇ ಕ್ರಾಸು ಹಾಗೂ ಮನೆ ನಂಬರಿನಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಏನು ಪರಿಹಾರ ಕೇಳಿ ಈ ದಾವೆಯನ್ನು ಹಾಕಿದ್ದಾರೆ ಹಾಗೂ ಯಾವ ಯಾವ ಆಸ್ತಿಗಳ ಮೇಲೆ ಕೇಸು ಹಾಕಿದ್ದಾರೆ ಎಂದು ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ಅವರೇ ಮಾಹಿತಿ ಕೊಟ್ಟಿದ್ದರು ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೇನು ಬರೆಯಲಾಗಿದೆ ಎಂದು ವೈಯಕ್ತಿಕವಾಗಿ ಮಾಹಿತಿ ಗೊತ್ತಿದೆಯಾ ಎಂದರೆ ಅದಲು ಬದಲು ಪತ್ರದ ಬಗ್ಗೆ ಬರೆಯಲಾಗಿದೆ ಎಂದು ಹೇಳುತ್ತಾರೆ.

4. ಅದಲು ಬದಲು ಪತ್ರ ಯಾವಾಗ ಆಯಿತು ಎಂದರೆ ದಿನಾಂಕ 02-11-2017 ರಂದು ಆಗಿದೆ. ಅದಲು ಬದಲು ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಎಂದರೆ ನಾನು, ಚೆನ್ನಪ್ಪ ಅಡಿವೆಪ್ಪ, ಗಣೇಶಪ್ಪ ಗಂಗನಗೌಡ್ರ ಸಹಿ ಮಾಡಿರುತ್ತೇವೆ. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದರೆ ನನಗೆ ಬೇರೆ ಏನೂ ಮಾಹಿತಿ ಇಲ್ಲ. ಅದಲು ಬದಲು ಪತ್ರವನ್ನು ಎಲ್ಲಿ ಎಷ್ಟು ಗಂಟೆಗೆ ನೊಂದು ಮಾಡಿಸಲಾಯಿತು ಎಂದರೆ ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ಸಂಜೆ 04.00 ಗಂಟೆಯ ಮೇಲೆ ನೊಂದು ಮಾಡಿಸಲಾಯಿತು. ಆ ಅದಲು ಬದಲು ಪತ್ರಕ್ಕೆ ಸಬ್ ರಜಿಸ್ಟರ್ ಕಚೇರಿಯ ಹೊರಗೆ ಸಹಿ ಮಾಡಿದ್ದೀರಾ ಅಥವಾ ಒಳಗೆ ಸಹಿ ಮಾಡಿದ್ದೀರಾ ಎಂದರೆ ಕಚೇರಿಯ ಒಳಗೆ ಸಹಿ ಮಾಡಿರುತ್ತೇನೆ. ಆ ಅದಲು ಬದಲು ಪತ್ರ ಬರೆಯಲು ಯಾರು ಮಾಹಿತಿ ಕೊಟ್ಟಿದ್ದಾರೆ ಹಾಗೂ ಅದನ್ನು ಯಾರು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

5. ಅದಲು ಬದಲು ಪತ್ರಗಳನ್ನು ಯಾರ ಅನುಕೂಲಕ್ಕಾಗಿ ಮಾಡಿಕೊಳ್ಳಲಾಯಿತು ಎಂದರೆ ಸಾಕ್ಷಿಯೂ ಅವರವರ ವಾಸದ ಅನುಕೂಲಕ್ಕಾಗಿ ಅದಲು ಬದಲು ಪತ್ರ ಮಾಡಿಕೊಂಡಿರುತ್ತಾರೆ. ಅದಲು ಬದಲು ಪತ್ರದ ಪ್ರಕಾರ ಯಾವ ಯಾವ ಆಸ್ತಿ ಯಾರ ಯಾರಿಗೆ ಹೋಯಿತು ಎಂದರೆ ಮನೆ ನಂ.712 ಸಾಬೀಯಾ ಅವರಿಗೆ 502/2 ಸಿದ್ದಲಿಂಗಪ್ಪ ರವರಿಗೆ ಮಾಡಿಕೊಂಡಿರುತ್ತಾರೆ. ವಾದಿಗೆ ದಾವಾ ಆಸ್ತಿಯ ಶೆಡ್ಯೂಲ್ ಕ 1 ನೇ ಆಸ್ತಿಯ ಹಿಸ್ಸೆಯನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಸಾಬೀಯಾ ಮತ್ತು ಸಿದ್ದಲಿಂಗಪ್ಪ ರವರ ಜೊತೆ ಸೇರಿಕೊಂಡು ಅದಲು ಬದಲು ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿಗೆ ದಾವಾ

ಆಸ್ತಿಯ ಶೆಡ್ಯೂಲ್ ಕ 1 ನೇ ಆಸ್ತಿಯ ಸ್ವಾಧೀನವನ್ನು ಯಾವ ದಿನಾಂಕ ಯಾರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು 10 ಮತ್ತು 11 ನೇ ಪ್ರತಿವಾದಿಯರ ಮಾತು ಕೇಳಿ ನಾವೇಲ್ಲರೂ ಸೇರಿ ಸೃಷ್ಟಿ ಮಾಡಿರುವ ಅದಲು ಬದಲು ಪತ್ರಕ್ಕೆ ಸಹಿ ಹಾಕಿ 10 ಮತ್ತು 11 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಕೊಡಿಯಾಲ ಹೊಸಪೇಟೆ ಗ್ರಾಮದ ದಾವಾ ಆಸ್ತಿಯ ಶೆಡ್ಯೂಲ್ ಕ 1 ಆಸ್ತಿ ನಂ.702/12 ಎ ಆಸ್ತಿಯಲ್ಲಿ ವಾದಿಯೂ ಈಗಲೂ ಸ್ವಾಧಿನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಹಾಗೂ ಸಾಕ್ಷಿ ಮುಂದುವರೆದು ಆ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಶೆಡ್ಯೂಲ್ ಕ 1 ಆಸ್ತಿ ನಂ.702/12 ಎ ಆಸ್ತಿಯಲ್ಲಿ ವಾದಿ ಅವರ ತಂದೆಯ ಕಾಲದಿಂದ ಸುಮಾರು 40 ವರ್ಷದಿಂದ ಇದ್ದು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನಾನು ನೋಡಿಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.